ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1**

ಸಂಖ್ಯೆ: ಯೋ–10/ಉ.ಬೈ.ವಿ.ಯೋ–01/2009–10 ದಿನಾಂಕ: 25–06–2009

**ದಿನಾಂಕ 25-06-2009ರಂದು ಅಪರಾಹ್ನ 3-00 ಗಂಟೆಗೆ ನಡೆದ 2009-10ನೇ ಸಾಲಿನಲ್ಲಿ ಉಚಿತ ಬೈಸಿಕಲ್ ವಿತರಣೆ ಯೋಜನೆಗೆ ಬೈಸಿಕಲ್‌ಗಳನ್ನು ಖರೀದಿ ಮಾಡಲು ಕರೆದಿರುವ ಟೆಂಡರ್‌ನ ಪ್ರೀ-ಬಿಡ್ ಸಭೆಯ ನಡಾವಳಿ:**

**ಹಾಜರಿದ್ದ ಸಮಿತಿ ಸದಸ್ಯರುಗಳು:**

1) ಶ್ರೀ ಜಿ. ಕುಮಾರ ನಾಯಕ, ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು
2) ಪ್ರೊ. ಸುಬೋದ್ ಕುಮಾರ್, ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು
3) ಶ್ರೀ ಚಿದ್ರೆ ಶಂಕ್ರಯ್ಯ ಸ್ವಾಮಿ, ನಿರ್ದೇಶಕರು (ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು
4) ಶ್ರೀ ಮೀರ್ ಉಬೇದುಲ್ಲಾ, ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು
5) ಶ್ರೀಮತಿ ಕೋಮಲ, ಜಂಟಿ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು
6) ಶ್ರೀ ಎಂ.ಎಸ್.ಪಾಟೀಲ್, ಸಹ ನಿರ್ದೇಶಕರು, ಎಸ್.ಎಸ್.ಎ, ಬೆಂಗಳೂರು
7) ಶ್ರೀ ಶ್ರೀಕಂಠರಾವ್, ಮುಖ್ಯಲೆಕ್ಕಾಧಿಕಾರಿಗಳು, ಆಯುಕ್ತರ ಕಛೇರಿ, ಬೆಂಗಳೂರು.
8) ಶ್ರೀ ನರೇಂದ್ರ ಬಾಬು.ಎನ್, ಸಹಾಯಕ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು
9) ಶ್ರೀ ಹೊಸಮನಿ, ಎಂ.ಎಸ್ & ಎಂ.ಇ.ಡಿ.ಐ, ರಾಜಾಜಿನಗರ, ಬೆಂಗಳೂರು.
10) ಶ್ರೀ ಸಿ.ನಾಗರಾಜನ್, ಉಪನಿರ್ದೇಶಕರು(ಯೋಜನೆ), ಆಯುಕ್ತರ ಕಛೇರಿ, ಬೆಂಗಳೂರು.
11) ಶ್ರೀ ಹೆಚ್.ಸಿ.ಚಿಟ್ಟಪ್ಪ, ಯು.ವಿ.ಸಿ.ಇ., ಕಾಲೇಜು, ಬೆಂಗಳೂರು.
12) ಶ್ರೀ ಎಸ್.ಆರ್.ಸವರಿನಾದನ್, ಹಿ.ಸ.ನಿ (ಯೋಜನೆ), ಆಯುಕ್ತರ ಕಛೇರಿ, ಬೆಂಗಳೂರು.

**ಹಾಜರಿದ್ದ ಟೆಂಡರ್‌ದಾರರು/ ಪ್ರತಿನಿಧಿಗಳು:**

1) ಶ್ರೀ ಜಿ.ಡಿ.ಕಪೂರ್, ಮೆ।। ಹೀರೊ ಸೈಕಲ್ಸ್ ಲಿಮಿಟೆಡ್
2) ಶ್ರೀ ಮುಳೈವಲ್ಲವನ್, ಮೆ।। ಏವನ್ ಸೈಕಲ್ಸ್ ಲಿಮಿಟೆಡ್
3) ಶ್ರೀ ಕೆ.ಕೆ.ಛಡ್ಡಾ, ಮೆ।। ಅಟ್ಲಸ್ ಸೈಕಲ್ಸ್ ಲಿಮಿಟೆಡ್
4) ಶ್ರೀ ನಂಬಿಯಾರ್, ಮೆ।। ಟಿ ಐ ಸೈಕಲ್ಸ್ ಅಫ್ ಇಂಡಿಯಾ
5) ಶ್ರೀ ಅಯ್ಯಪ್ಪನ್.ಎ.ಅರುಣ್‌ಕುಮಾರ್, ಮೆ।। ಸಫಾರಿ ಬೈಕ್ಸ್ ಲಿಮಿಟೆಡ್

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು ಇವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಮತ್ತು ಬಿಡ್‌ದಾರರು/ಸಂಸ್ಥೆಯ ಪ್ರತಿನಿಧಿಗಳಿಗೆ ಸ್ವಾಗತ ಕೋರಿ ಅವರನ್ನು ಉದ್ದೇಶಿಸಿ ಮಾತನಾಡುತ್ತಾ ಸರ್ಕಾರದ ಧ್ಯೇಯೊದ್ದೇಶವನ್ನು ಸ್ಪಷ್ಟಪಡಿಸಿ ಪ್ರಸಕ್ತ ಸಾಲಿನಲ್ಲಿ ಸುಮಾರು 6.70 ಲಕ್ಷ ಮಕ್ಕಳಿಗೆ ಬೈಸಿಕಲ್ ವಿತರಣೆ ಮಾಡಲು ಉದ್ದೇಶಿಸಿದ್ದು ಅದರ ಸಲುವಾಗಿ ಬೈಸಿಕಲ್‌ಗಳನ್ನು ಖರೀದಿ ಮಾಡಲು ದಿನಾಂಕ 05–06–2009ರಂದು ಟೆಂಡರ್ ಆಹ್ವಾನಿಸಿ ಪ್ರಕಟಣೆ ನೀಡಲಾಗಿದೆ ಎಂದು ತಿಳಿಸಿದರು.

ಮುಂದುವರೆದು ಟೆಂಡರ್ ದಸ್ತಾವೇಜಿನಲ್ಲಿ ಏನಾದರೂ ಬದಲಾವಣೆಗಳಿದ್ದಲ್ಲಿ ಅಥವಾ ಬಿಡ್‌ದಾರರಿಗೆ ದಸ್ತಾವೇಜಿನಲ್ಲಿ ನಮೂದಿಸಿರುವ ವಿಷಯದ ಬಗ್ಗೆ ಸ್ಪಷ್ಟೀಕರಣ / ಅನುಮಾನಕ್ಕೆ ಪರಿಹಾರ ನೀಡುವ ಸಲುವಾಗಿ ಪ್ರೀ-ಬಿಡ್ ಸಭೆಯನ್ನು ಇಂದು ಕರೆಯಲಾಗಿದೆ ಎಂದು ತಿಳಿಸುತ್ತಾ ಈ ಸಂಬಂಧ ಸಭೆಯಲ್ಲಿ ಪಾಲ್ಗೊಂಡಿರುವ ಬಿಡ್‌ದಾರರಿಗೆ ಈಗ ಪ್ರಕಟಣೆ ಮಾಡಿರುವ ಬಿಡ್ ಸಂಬಂಧ ತಮಗಿರುವ ಅನುಮಾನ/ಸ್ಪಷ್ಟೀಕರಣಗಳನ್ನು ಸಭೆಯ ಮುಂದೆ ಇಡಲು ಆಯುಕ್ತರು ತಿಳಿಸಿದರು.

- ಟೆಂಡರ್ ದಸ್ತಾವೇಜುಗಳ ಪುಟ ಸಂಖ್ಯೆ 01 ಹಾಗೂ 02 ರಲ್ಲಿ "TENDER DOCUMENT FOR SUPPLY OF BI-CYCLES FOR GIRLS/BOYS BELONGING TO BELOW POVERTY

LINE FAMILIES & STUDYING IN 8TH STANDARD DURING 2008-09" ಎಂದು ತಪ್ಪಾಗಿ ನಮೂದಾಗಿರುವುದನ್ನು ತಿಳಿಸಿ ಅದನ್ನು **"TENDER DOCUMENT FOR SUPPLY OF BI-CYCLES FOR GIRLS / BOYS STUDYING IN 8TH STANDARD OF GOVERNMENT & AIDED SCHOOLS DURING 2009-10" ಓದಿಕೊಳ್ಳಲು ತಿಳಿಸಲಾಯಿತು**.

- **<u>Section III / Para 6 - Logo :-</u>**

  **"ಟೆಂಡರ್ ದಸ್ತಾವೇಜುಗಳ ಪುಟ ಸಂಖ್ಯೆ 18/20 ರಲ್ಲಿ**

  "A Logo be embossed on the Bi-cycle as "Suvarna Karnataka"and slogan "Hennuondu Kalithare Shale ondu Teredante"/"Shikshanave Shakthi" and to adopt "Sarvajanika Shikshana Elaake", "Karnataka Sarkara"on both sides of centre bar of the Bi-cycle" **ಎಂದು ನಮೂದಿಸಿರುವುದನ್ನು**

  **"A Logo with slogan "Hennuondu Kalithare Shale ondu Teredante" / "Shikshanave Shakthi" to be affixed on the Bi-cycle as per the design given by purchaser and to adopt "Sarvajanika Shikshana Elaake", "Karnataka Sarkara" on both sides of centre bar of the Bi-cycle".**

  **ಎಂದು ಓದಿಕೊಳ್ಳಲು ತಿಳಿಸಲಾಯಿತು**.

- **<u>ಪುಟ22/24 ಕಂಡಿಕೆ 14.6 : Warranty Amount:</u>**

  ಮೆ॥ ಅಟ್ಲಾಸ್ ಸೈಕಲ್ಸ್ (ಹ) ಲಿ., ಮಧ್ಯ ಪ್ರದೇಶ ಮತ್ತು ಮೆ॥ ಟಿ.ಐ.ಸೈಕಲ್ಸ್ ಆಫ್ ಇಂಡಿಯಾ, ಚೆನ್ನೈ ಈ ಸಂಸ್ಥೆಯವರು ಮಾತನಾಡುತ್ತಾ ಖರೀದಿ ಮಾಡುವ ಬೈಸಿಕಲ್‌ಗಳಿಗೆ ವ್ಯಾರಂಟಿ ಅವಧಿಯು 2 ವರ್ಷಗಳಿದ್ದು, ಪ್ರತಿ ವರ್ಷಕ್ಕೆ ಬೈಸಿಕಲ್ ದರದ ಶೇ.5% ರಂತೆ 2 ವರ್ಷಕ್ಕೆ ಶೇ.10% ರಷ್ಟು ಮೊತ್ತದ ಹಣವನ್ನು (ಇದರಲ್ಲಿ ಶೇ.5%ರಷ್ಟು ಮೊತ್ತವನ್ನು ನಗದು ರೂಪದಲ್ಲಿ ಮತ್ತು ಶೇ.5%ರಷ್ಟು ಮೊತ್ತವನ್ನು ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ) ಸರಬರಾಜುದಾರರು / ಖರೀದಿದಾರರ ಬಳಿ ವಾರಂಟಿ ಹಣವಾಗಿ ಇಡಬೇಕು ಎಂಬ ಷರತ್ತನ್ನು ಪ್ರಸ್ತುತಪಡಿಸುತ್ತಾ ಶೇ.5%ರಷ್ಟು ಹಣವನ್ನು ನಗದು ರೂಪದಲ್ಲಿ ಇಟ್ಟಲ್ಲಿ ತಮ್ಮ ಕೋಟ್ಯಾಂತರ ರೂಪಾಯಿ ದುಡಿಯುವ ಬಂಡವಾಳದ ಹಣವನ್ನು (Working Capital) ತಡೆಹಿಡಿದಂತಾಗುತ್ತದೆ, ಆದ್ದರಿಂದ ಇದರ ಬದಲಾಗಿ ಸಂಪೂರ್ಣ ಶೇ.10%ರಷ್ಟು ಹಣವನ್ನು ಬ್ಯಾಂಕ್ ಗ್ಯಾರಂಟಿ ರೂಪದಲ್ಲಿಯೇ ಪಡೆಯುವಂತೆ ಕೋರಿದರು.

  **<u>ತೀರ್ಮಾನ:</u>**

  **ಸದರಿ ಷರತ್ತಿನ ಬಗ್ಗೆ ಸಭೆಯಲ್ಲಿ ಚರ್ಚಿಸಿದ ನಂತರ ಯಾವುದೇ ಬದಲಾವಣೆ ಮಾಡದಿರಲು ಮತ್ತು ಈ ಹಿಂದೆ ಪಡೆಯುತ್ತಿದ್ದಂತೆ ಶೇ.5% ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ಮತ್ತು ಶೇ.5%ರಷ್ಟು ಮೊತ್ತವನ್ನು ನಗದು ರೂಪದಲ್ಲಿ ಪಡೆಯಲು ತೀರ್ಮಾನಿಸಲಾಯಿತು.**

- **<u>ಬೈಸಿಕಲ್ ವಿತರಣೆಗೆ ಕಾಲಾವಕಾಶ: (Delivery Schedule) Section 5 : Page 32/36</u>**

  ಮೆ॥ ಟಿ.ಐ.ಸೈಕಲ್ಸ್ ಆಫ್ ಇಂಡಿಯಾ, ಚೆನ್ನೈ ಸಂಸ್ಥೆಯ ಪ್ರತಿನಿಧಿಯವರು ಮಾತನಾಡುತ್ತಾ ಪ್ರಸಕ್ತ ಸಾಲಿನಲ್ಲಿ ಸುಮಾರು 6.70 ಲಕ್ಷ ಬೈಸಿಕಲ್‌ಗಳನ್ನು ವಿತರಣೆ ಮಾಡಬೇಕಾಗಿರುವುದರಿಂದ, ಬೈಸಿಕಲ್‌ಗಳನ್ನು ಸಕಾಲದಲ್ಲಿ ತಯಾರಿಸಿ ಜಿಲ್ಲಾ ಹಂತದಲ್ಲಿ ಸರಬರಾಜು ಮಾಡಬಹುದಾದರೂ ಅವುಗಳ ಜೋಡಣೆಗೆ ಬಹಳಷ್ಟು ಸಮಯ ಹಿಡಿಯುವುದರಿಂದ, ಟೆಂಡರ್‌ನಲ್ಲಿ ನಮೂದಿಸಿರುವಂತೆ 90 ದಿನಗಳ ಅವಧಿಯಲ್ಲಿ ಪೂರ್ಣಗೊಳಿಸುವುದು ಸಾಧ್ಯವಾಗುವುದಿಲ್ಲವಾದ್ದರಿಂದ ಈ ಅವಧಿಯನ್ನು 120 ದಿನಗಳವರೆಗೆ ವಿಸ್ತರಿಸಲು ಕೋರಿದರು.

**<u>ತೀರ್ಮಾನ:</u>**

**ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ 2008-09ನೇ ಸಾಲಿನಲ್ಲಿಯೂ ಹೆಚ್ಚು ಕಡಿಮೆ ಇದೇ ಸಂಖ್ಯೆಯ ಬೈಸಿಕಲ್‌ಗಳನ್ನು ನಿಗಧಿತ 90 ದಿನಗಳಲ್ಲಿ ಪೂರೈಕೆ ಮಾಡಲಾಗಿರುವುದನ್ನು ಸ್ಮರಿಸುತ್ತಾ ಸರಬರಾಜು ಮತ್ತು ವಿತರಣೆ ಅವಧಿಯನ್ನು 90 ದಿನಗಳಿಗಿಂತ ಹೆಚ್ಚಿಗೆ ನಿಗಧಿಪಡಿಸಿದಲ್ಲಿ ಬೈಸಿಕಲ್‌ಗಳನ್ನು ಡಿಸೆಂಬರ್-2008ರ ಅಂತ್ಯದವರೆವಿಗೂ ವಿತರಣೆ ಕಾರ್ಯ ಮುಂದುವರೆಯುತ್ತದೆ, ಹೀಗಾದಲ್ಲಿ ಪ್ರಸಕ್ತ ಸಾಲಿನ ಶೈಕ್ಷಣಿಕ ಅವಧಿಯ ಅಂತ್ಯದಲ್ಲಿ ಮಕ್ಕಳಿಗೆ ಬೈಸಿಕಲ್ ವಿತರಿಸಿದಂತಾಗುತ್ತದೆ, ಇದರಿಂದ ಯೋಜನೆಯ ಶೀಘ್ರ ಅನುಷ್ಠಾನಕ್ಕೆ ಧಕ್ಕೆಯಾಗುತ್ತದೆ ಎಂಬುದನ್ನು ಮನಗಂಡ ಸಭೆಯು ಸರಬರಾಜು ಅವಧಿಯನ್ನು 90 ದಿನಗಳಿಗೆ ಸೀಮಿತಗೊಳಿಸಲು ತೀರ್ಮಾನಿಸಿತು.**

- **<u>ವಾರ್ಷಿಕ ವಾಹಿವಾಟು ರೂ.100 ಕೋಟಿ ನಿಗಧಿಪಡಿಸಿರುವ ಬಗ್ಗೆ:</u>**

ಸಫಾರಿ ಬೈಕ್ಸ್ ಸಂಸ್ಥೆಯ ಪ್ರತಿನಿಧಿಯು ಮಾತನಾಡಿ 'Turn over' ರೂ.100 ಕೋಟಿ ಇದ್ದಲ್ಲಿ ಮಾತ್ರ ಬಿಡ್‌ಸಲ್ಲಿಸಲು ಅರ್ಹರು ಎಂಬುದರ ಬಗ್ಗೆ ಪ್ರಸ್ತಾಪಿಸಿ, ತಮ್ಮ ಸಂಸ್ಥೆಯ ವಾರ್ಷಿಕ ವಾಹಿವಾಟು ರೂ.100 ಕೋಟಿಗಿಂತ ಸ್ವಲ್ಪ ಕಡಿಮೆ ಇರುವುದರಿಂದ ತಾವು ಬಿಡ್‌ನಲ್ಲಿ ಭಾಗವಹಿಸಲು/ಸ್ಪರ್ಧಿಸಲು ಸಾಧ್ಯವಾಗುತ್ತಿಲ್ಲ ಆದ್ದರಿಂದ ನಮಗೆ ಬಿಡ್‌ನಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಈ ಷರತ್ತನ್ನು ಸಡಿಲಿಸಲು ಮತ್ತು ಈ ಕುರಿತು ಸ್ಪಷ್ಟತೆ ನೀಡುವಂತೆ ಕೋರಿ ಮನವಿಯನ್ನು ಸಲ್ಲಿಸಿದರು.

**<u>ತೀರ್ಮಾನ:</u>**

**ಸದರಿ ವಿಷಯವನ್ನು ಸಮಿತಿ ಸದಸ್ಯರೊಂದಿಗೆ ಚರ್ಚಿಸಿದ ನಂತರ ಬೈಸಿಕಲ್‌ಗಳನ್ನು ಮುಖ್ಯವಾಗಿ ಗುಡ್ಡಗಾಡು ಮತ್ತು ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಸಾರಿಗೆ ಅನುಕೂಲ ಕಲ್ಪಿಸಲು ನೀಡುತ್ತಿರುವುದರಿಂದ ಒಳ್ಳೆಯ ಗುಣಮಟ್ಟದ ಬೈಸಿಕಲ್‌ಗಳನ್ನು ವಿತರಿಸುವುದು ಸರ್ಕಾರದ ಧ್ಯೇಯೋದ್ದೇಶವಾಗಿರುತ್ತದೆ, ಅಲ್ಲದೇ ಖರೀದಿ ಮಾಡುವ ಬೈಸಿಕಲ್‌ಗಳ ಸಂಖ್ಯೆಯು ಸುಮಾರು 6,70,000 ಆಗಿರುವುದರಿಂದ ಬೈಸಿಕಲ್‌ಗಳ ಉತ್ಪಾದನೆ ಮತ್ತು ವಿತರಣೆ ಕಾರ್ಯವು ಕ್ಲುಪ್ತಕಾಲದಲ್ಲಿ ಪೂರ್ಣಗೊಳಿಸಬೇಕಾಗಿರುವುದರಿಂದ ಈ ಎರಡೂ ಉದ್ದೇಶಗಳನ್ನು ಸಕಾಲದಲ್ಲಿ ಪೂರೈಕೆ ಮಾಡುವ ಸಾಮರ್ಥ್ಯ ಮತ್ತು ಸದೃಢತೆವುಳ್ಳ ಸಂಸ್ಥೆಗಳು ಮಾತ್ರ ಈ ಬಿಡ್‌ನಲ್ಲಿ ಭಾಗವಹಿಸ ಬೇಕೆಂಬ ಸಕಾರಣದಿಂದ, ಬಿಡ್‌ನಲ್ಲಿ ಭಾಗವಹಿಸುವ ಸಂಸ್ಥೆಯ ವಾರ್ಷಿಕ ವಹಿವಾಟು ರೂ.100 ಕೋಟಿಗಿಂತಲೂ ಕಡಿಮೆ ಇರಬಾರದೆಂಬ ಷರತ್ತನ್ನು ವಿಧಿಸಿರುವುದು ಸೂಕ್ತವೆಂದು ತಿಳಿಸಿ, ಈ ಷರತ್ತಿನಲ್ಲಿ ಯಾವುದೇ ಬದಲಾವಣೆ ಮಾಡದಿರಲು ನಿರ್ಧರಿಸಲಾಯಿತು.**

ಸಭೆಯಲ್ಲಿ ಚರ್ಚಿಸಲು ಯಾವುದೇ ವಿಷಯವಿಲ್ಲದಿದ್ದ ಕಾರಣ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-

**(ಜಿ.ಕುಮಾರ ನಾಯಕ)**

ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು ಹಾಗೂ ಅಧ್ಯಕ್ಷರು,
ಖರೀದಿ ಮತ್ತು ಗುಣಮಟ್ಟ ಸಮಿತಿ